ಆ) ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಖರ್ಚಾದ ಹಣ
	೧೯೮೪–೮೫ನೇ ಸಾಲಿನಲ್ಲಿ	
೪೦೦	೧೬೪	೧೨.೦೦ ಲಕ್ಷ
	೧೯೮೫–೮೬ನೇ ಸಾಲಿನಲ್ಲಿ	
೩೦೦	೩೪	೨.೫೦ ಲಕ್ಷ

ಆಳಂದ್ ತಾಲ್ಲೂಕಿಗೆ ನೀರು ಸರಬರಾಜು ಮಾಡುವ ಬಗ್ಗೆ

೧೮೭೩. ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ವರ್ಷ ಆಳಂದ್ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ನೀರನ್ನು ಹೊರಗಿನಿಂದ ಟ್ರಾಕ್ಟರ್ ಹಾಗೂ ಬಂಡಿಗಳ ಮೂಲಕ ಸರಬರಾಜು ಮಾಡಲಾಗಿದ್ದಿತು.

ಆ) ಈ ವರ್ಷ ನೀರು ಸರಬರಾಜು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಕೆಲವು ಗ್ರಾಮಗಳಿಗೆ ಟ್ರಾಕ್ಟರ್‌ನಿಂದ ನೀರುಸರಬರಾಜು ಮಾಡುತ್ತಿದ್ದು ಮಂತ್ರಿತರ ಗ್ರಾಮಗಳಿಗೆ ನೀರಿನ ತೊಂದರೆ ಇದ್ದಾಗ್ಯೂ ಟ್ರಾಕ್ಟರ್‌ಗಳಿಗೆ ಟೆಂಡರು ಕರೆದಿರುವುದಾಗಿ ತಿಳಿದು ಜನರಿಗೆ ತೊಂದರೆ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಮಂತ್ರಿ ಪಕ್ಷ ಮಂತ್ರಿಗಳು).—

ಅ) ೧೬

ಆ) ೧೯೮೭ರ ಫೆಬ್ರುವರಿ ತಿಂಗಳಲ್ಲಿ ಮಂಜೂರಾಗಿರುವ ೨೮ ಕೊಳವೆ ಬಾವಿಗಳನ್ನು ಆಳಂದ್ ತಾಲ್ಲೂಕಿನಲ್ಲಿ ಕೊರೆಯಲಾಗಿತ್ತಿದೆ. ಹಾಗೂ ಈ ವರ್ಷದಲ್ಲಿ ೬ ಗ್ರಾಮಗಳಿಗೆ ನೀರನ್ನು ಟ್ರಾಕ್ಟರ್ ಮೂಲಕ ಸರಬರಾಜು ಮಾಡಲಾಗುತ್ತಿದೆ. ಟ್ರಾಕ್ಟರ್ ಮೂಲಕ ನೀರು ಸರಬರಾಜು ಅವಶ್ಯ ಎಂದೆಡೆಗಳಲ್ಲಿ ಸರಬರಾಜು ಮಾಡಲಾಗುತ್ತಿದೆ.

ಇ) ಅಂತಹ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಗುಡಗೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆಯ ಬಗ್ಗೆ

೧೮೭೪. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಣೆಬೆನ್ನೂರು ತಾಲ್ಲೂಕಿನ ಗುಡಗೂರು ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಡಿ ಮಂಜೂರಾಗಿದೆಯೆ ?

ಆ) ಯೋಜನೆಯ ಅಂದಾಜು ವೆಚ್ಚದ ಮೊತ್ತ

ಇ) ಇಲ್ಲಿಯವರೆಗೆ ಕೆಲಸ ಪ್ರಾರಂಭಿಸದಿರಲು ಕಾರಣಗಳೇನು ?